OS No.197/2012 PW-**1**

**ದಿನಾಂಕ 14.12.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾಯಿ, ನನ್ನ ಅಕ್ಕ, ಮತ್ತು ನನ್ನ ತಮ್ಮಂದಿರು ಈ ದಾವಾದಲ್ಲಿ ಸಾಕ್ಷ್ಯಾ ನುಡಿಯಲು ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ. 6 ತಿಂಗಳ ಹಿಂದೆ ನನಗೆ ಅಧಿಕಾರ ಪತ್ರ ಬರೆದು ಕೊಟ್ಟಿರುತ್ತಾರೆ ಸದರಿ ಅಧಿಕಾರ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಾಯಿ, ನನ್ನ ಅಕ್ಕ, ಮತ್ತು ನನ್ನ ತಮ್ಮಂದಿರು ಈ ದಾವಾದಲ್ಲಿ ಸಾಕ್ಷ್ಯಾ ನುಡಿಯಲು ಅಧಿಕಾರ ಪತ್ರ ಬರೆದುಕೊಟ್ಟಿಲ್ಲ ನಾನು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಿನ ನನ್ನೊಂದಿಗೆ ನನ್ನ ಯಜಮಾನರಾದ ರಮೇಶ್ ರವರು ಬಂದಿರುತ್ತಾರೆ ಅವರು ನ್ಯಾಯಾಲಯದಲ್ಲಿ ಕುಳಿತಿರುತ್ತಾರೆಂದರೆ ಸರಿ. ನನಗೆ ದಿಃ18.11.1995 ರಂದು ಮದುವೆಯಾಗಿರುತ್ತದೆ. ಮದುವೆಯಾದ ದಿನದಿಂದಲೂ ನಾನು ಮತ್ತು ನನ್ನ ಯಜಮಾನರು ಬೇರೆ ವಾಸವಾಗಿರುತ್ತೇವೆ ಎಂದರೆ ಇಲ್ಲ ನಾನು ನನ್ನ ತಂದೆಯ ಜೊತೆ ವಾಸವಾಗಿರುತ್ತೇವೆ. ನನ್ನ ತಂದೆಗೆ ಕ್ಯಾನ್ಸರ್ ರೋಗ ಬಂದ ನಂತರ ನಾವು ವಿಭಾಗ ಮಾಡಿಕೊಂಡಿರುತ್ತೇವೆ. 2014-2015 ನೇ ಸಾಲಿನಲ್ಲಿ ನಾವು ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗ ಪತ್ರ ನೊಂದಣಿಯಾಗಿರುತ್ತದೆ ನಾನು ನನ್ನ ತಂದೆಯ ಜೊತೆಯಲ್ಲಿಯೇ ಒಟ್ಟಾಗಿ ಇದ್ದೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇಲ್ಲ. ನಾನು ಮದುವೆಯಾದಾಗಿನಿಂದಲೂ ನನ್ನ ಯಜಮಾನರ ಜೊತೆ ಬೇರೆ ವಾಸ ಮಾಡಿಕೊಂಡಿದ್ದೆ ನನ್ನ ತಂದೆಯ ಜೊತೆ ಯಾವತ್ತೂ ಒಟ್ಟಾಗಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ.

2.ಪ್ರತಿವಾದಿ ನನ್ನ ಯಜಮಾನರ ಸ್ನೇಹಿತರಾಗಿದ್ದರು ಎಂದರೆ ಸರಿಯಲ್ಲ ನನ್ನ ತಂದೆಯ ಸ್ನೇಹಿತರಾಗಿದ್ದರು. ನನ್ನ ತಂದೆಗೂ ಮತ್ತು ಪ್ರತಿವಾದಿಗೂ ಪರಿಚಯವೇ

ಇಲ್ಲ ಆದರೂ ಪ್ರತಿವಾದಿಯವರು ನನ್ನ ತಂದೆಯ ಸ್ನೇಹಿತ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯವರು ನನ್ನ ತಂದೆಯವರನ್ನು ಭೇಟಿ ಮಾಡಿ ಸದರಿ ದಾವಾ ಆಸ್ತಿಯ ಬಗ್ಗೆ ಕರಾರು ಮಾಡಿಕೊಳ್ಳಲು ಮುಂದೆ ಬಂದಿರುತ್ತಾರೆ. 2010 ರಲ್ಲಿ ಮೊದಲನೇ ಬಾರಿಗೆ ಪ್ರತಿವಾದಿಯವರು ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆಂದು ನನ್ನ ತಂದೆಯವರ ಬಳಿ ಬಂದಿದ್ದರು ಆದರೆ ನನಗೆ ತಿಂಗಳು ದಿನಾಂಕ ನೆನಪಿಲ್ಲ. ಪ್ರತಿವಾದಿಯವರು ಆಸ್ತಿಯನ್ನು ಮಾರಾಟ ಮಾಡುತ್ತೇನೆಂದು ನನ್ನ ತಂದೆಯವರ ಬಳಿ ಬಂದಾಗ ನನ್ನ ತಾಯಿ, ನಾನು, ಹಾಗೂ ನನ್ನ ಮಕ್ಕಳು ಇದ್ದೆವು. ಪ್ರತಿವಾದಿ ದಾವಾ ಆಸ್ತಿಯನ್ನು ವ್ಯವಸಾಯ ಮಾಡಲು ಆಗುವುದಿಲ್ಲ ಆದ್ದರಿಂದ ಮಾರಾಟ ಮಾಡುತ್ತೇನೆಂದು ಬಂದಿದ್ದರು. ಪ್ರತಿವಾದಿಗೆ ದಾವಾ ಆಸ್ತಿ ಸ್ವಯಾರ್ಜಿತವಾಗಿ ಬಂದಿರುತ್ತದೆ. ಪ್ರತಿವಾದಿಯವರು ಪುಟ್ಟಸ್ವಾಮಯ್ಯರವರ ಮಗ ಅರುಣ್ ಕುಮಾರ್ ರವರಿಂದ ಸದರಿ ಆಸ್ತಿಯನ್ನು ದಿಃ03.07.2008 ರಂದು ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯ ಬೆಲೆಯನ್ನು ಮೊದಲ ಬಾರಿಗೆ ಬಂದಾಗ ಮಾತನಾಡಿಲ್ಲ ಬೇರೆ ದಿನ ಮಾತನಾಡಿದೆವು. ಮಾತುಕತೆಗೆ 4-5 ತಿಂಗಳು ಬಿಟ್ಟು ಬಂದಿರುತ್ತಾರೆ. ಆ ರೀತಿ ದಾವಾ ಆಸ್ತಿಯ ಮಾರಾಟದ ಮಾತುಕತೆಗೆ ಬಂದಾಗ ನಾನು ,ನನ್ನ ತಾಯಿ, ನನ್ನ ತಂದೆ, ನನ್ನ ಮಕ್ಕಳು ಇದ್ದೆವು. ಸದರಿ ದಿನವೇ ಮಾತುಕತೆ ನಡೆದಿರುತ್ತದೆ ಮಾತುಕತೆಯಾದಾಗ ಈ ಮೇಲೆ ಹೇಳಿದ ನನ್ನ ತಾಯಿ, ನನ್ನ ತಂದೆ ಮತ್ತು ನನ್ನ ಮಕ್ಕಳು ಹೊರತುಪಡಿಸಿದರೆ ಬೇರೆ ಯಾರು ಇರಲಿಲ್ಲ. ದಾವಾ ಆಸ್ತಿಯ ಮಾರಾಟದ ಮಾತುಕತೆಯಾದ 6  ನಂತರ ಕರಾರನ್ನು ಬರೆದುಕೊಟ್ಟಿರುತ್ತಾರೆ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪ್ರತಿವಾದಿಯವರು ಏನೇನು ದಾಖಲೆಗಳನ್ನು ಕೊಟ್ಟಿರುತ್ತಾರೆಂದು ನನ್ನ ತಂದೆಗೆ ಗೊತ್ತಿರುತ್ತದೆ. ಪ್ರತಿವಾದಿಯವರು ದಾವಾ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ರೀತಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪ್ರತಿವಾದಿಯವರು ಕೊಟ್ಟಂತಹ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ  ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಯವರು ಈ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ದಾಖಲೆಗಳನ್ನು ನನಗಾಗಲೀ ಅಥವಾ ನನ್ನ ತಂದೆಗಾಗಲೀ ಕೊಟ್ಟಿಲ್ಲ ಆದರೂ ನಾನು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯವರು 2008-ರಿಂದ ಈಚೆಗೆ ಕೂಡ್ಲೂರು, ಬಿಳಿಗುಂಬ ಗ್ರಾಮಗಳಲ್ಲಿ ಆಸ್ತಿಗಳನ್ನು ಕೊಂಡು ಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ಯಜಮಾನರೇ ಮುಂದೆ ನಿಂತು ಪ್ರತಿವಾದಿಗೆ ಕೂಡ್ಲೂರು, ಬಿಳಿಗುಂಬ ಗ್ರಾಮಗಳಲ್ಲಿ ಆಸ್ತಿಗಳನ್ನು ಕೊಡಿಸಿರುತ್ತಾರೆಂದರೆ ಇಲ್ಲ. ಪ್ರತಿವಾದಿಯವರು ಹಣಕಾಸಿನ ವಿಚಾರದಲ್ಲಿ ತುಂಬಾ ಸ್ಥಿತಿವಂತರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ.

3. ಕರಾರು ಪತ್ರ ಬರೆದುಕೊಡುವ ಕಾಲಕ್ಕೆ ನಾನು ನನ್ನ ತಂದೆ ಮತ್ತು ನನ್ನ ತಾಯಿ ಹಾಜರಿದ್ದೆವು. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಕರಾರು ಪತ್ರದಲ್ಲಿ ಹೇಳಿರುವ ಆಸ್ತಿಯ ಮಾರಾಟ ಹಣದ ಬಗ್ಗೆ ಮೊದಲೇ ಮಾತುಕತೆಯಾಗಿತ್ತು. ಸದರಿ ಮಾತುಕತೆಯಾದಾಗ ಯಾವುದೇ ಬರವಣಿಗೆ ಪ್ರತಿವಾದಿಯಿಂದ ಪಡೆದುಕೊಂಡಿರುತ್ತೇವೆ. ಸದರಿ ಮೂಲ ದಾಖಲಾತಿಗಳು ಮನೆಯಲ್ಲಿ ಇವೆ. ಸದರಿ ಮೂಲ ದಾಖಲಾತಿಗಳನ್ನು ನ್ಯಾಯಲಾಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿ ದಾವಾ ಆಸ್ತಿಗೆ ಸಂಬಂದಪಟ್ಟ ಯಾವುದೇ ಮೂಲ ದಾಖಲಾತಿಗಳನ್ನು ನನಗೆ ಕೊಟ್ಟಿಲ್ಲ ಆದರೂ ಮೂಲ ದಾಖಲಾತಿಗಳನ್ನು ಕೊಟ್ಟಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯವರು ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆಯವರ ಬಳಿ ದಿಃ10.06.2011 ರಂದು 8 ಲಕ್ಷ ರೂಪಾಯಿ ಹಣ ಇತ್ತು ಎನ್ನುವ ಬಗ್ಗೆ ನನ್ನ ಬಳಿ ದಾಖಲಾತಿ ಇದೆ. ಸದರಿ 8 ಲಕ್ಷ ರೂಪಾಯಿ ಹಣ ಮನೆಯಲ್ಲಿಯೇ ಇತ್ತು. ನಾವು ಸೈಟು ಮಾರಿದ ಹಣ ಮನೆಯಲ್ಲಿ ಇತ್ತು. ಸದರಿ ಸೈಟನ್ನು ಯಾವಾಗ ಯಾರಿಗೆ ಎಷ್ಟುಹಣಕ್ಕೆ ಮಾರಾಟ ಮಾಡಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಸೈಟನ್ನು ಮಾರಾಟ ಮಾಡಿದ ಬಗ್ಗೆ ನಮ್ಮ ಬಳಿ ದಾಖಲಾತಿಗಳು ಇವೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನ್ನ ತಂದೆಯವರು ಯಾವುದೇ ಸೈಟನ್ನು ಮಾರಾಟ ಮಾಡಿರುವುದಿಲ್ಲ, ಮತ್ತು ನನ್ನ ತಂದೆಯವರ ಬಳಿ ದಿಃ10.06.2011 ರಂದು 8 ಲಕ್ಷ ರೂಪಾಯಿ ಹಣ ಮನೆಯಲ್ಲಿ ಇರಲಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.ದಿಃ10.06.2011 ರ ಕಾಲಕ್ಕೆ ನನ್ನ ತಂದೆಗೆ 8 ಲಕ್ಷ ರೂಪಾಯಿ ಹಣವನ್ನು ಕೊಡುವ ಆರ್ಥಿಕ ಸಾಮಾರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸದರಿ 8 ಲಕ್ಷ ರೂಪಾಯಿ ಹಣವನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಕೊಟ್ಟಿರುತ್ತೇವೆ. ನಾನು

ಸದರಿ ದಿನ ಸಬ್ ರಿಜಿಸ್ಟರ್ ಕಛೇರಿಗೆ ಹೋಗಿದ್ದೆ. ಸದರಿ ದಿನ ಸಬ್ ರಿಜಿಸ್ಟರ್ ಕಛೇರಿಗೆ ಬೆಳಗ್ಗೆ 10.30 ಗಂಟೆಗೆ ಹೋಗಿರುತ್ತೇವೆ. ಸಬ್ ರಿಜಿಸ್ಟರ್ ಕಛೇರಿಗೆ ನನ್ನ ತಾಯಿ, ನನ್ನ ತಂದೆ, ನಾನು ಹೋಗಿರುತ್ತೇವೆ. ನಾವು 3 ಜನರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸಬ್ ರಿಜಿಸ್ಟರ್ ಕಛೇರಿಯ ಹತ್ತಿರ ಹೋದ ನಂತರ ಪತ್ರವನ್ನು ತಯಾರಿಸಿರುತ್ತೇವೆ. ಸದರಿ ಪತ್ರವನ್ನು ನನ್ನ ತಂದೆಯವರು ಮತ್ತು ನಾನು ಸೇರಿ ತಯಾರಿಸಿರುತ್ತೇವೆ. ಸದರಿ ಪತ್ರವನ್ನು ದಿನೇಶ್ ಎನ್ನುವ ಪತ್ರ ಬರಹಗಾರರು ತಯಾರಿಸಿರುತ್ತಾರೆ. ಸದರಿ ಪತ್ರ ಮಧ್ಯಾಹ್ನ 1.00 ಗಂಟೆಯ ಹೊತ್ತಿಗೆ ತಯಾರಾಗಿರುತ್ತದೆ. ಸದರಿ ಪತ್ರ ನೊಂದಣಿಯಾದಾಗ ನಾನು ನನ್ನ ತಂಧೆ ತಾಯಿ, ಮಾತ್ರ ಇದ್ದೆವು ಬೇರೆ ಯಾರು ಇರಲಿಲ್ಲ

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.